ಮಾತೃ ಜಿಲ್ಲೆಯ ಆರೋಗ್ಯ ವ್ಯವಸ್ಥೆ

852(1198); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಮಂಡ್ಯ ಜಿಲ್ಲೆಯಲ್ಲಿರುವ ಪಿ.ಹೆಚ್.ಸಿ./ಪಿ.ಹೆಚ್.ಯು.ಗಳ ಸಂಖ್ಯೆ ಎಷ್ಟು; ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಸಂಖ್ಯೆ ಎಷ್ಟು;

ಆ) ಈ ಆರೋಗ್ಯ ಕೇಂದ್ರ ಘಟಕ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಮಂಜೂರಾಗಿರುವ ವೈದ್ಯಕೀಯ, ಅರೆ ವೈದ್ಯಕೀಯ ಮತ್ತು ಇತರೆ ಸಿಬ್ಬಂದಿಯ ಸಂಖ್ಯೆ ಎಷ್ಟು ಇವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಪ್ರತಿಯೊಂದು ಕೇಂದ್ರ/ಘಟಕ/ಆಸ್ಪತ್ರೆಯ ವಿವರ ಒದಗಿಸುವುದು);

ಈ) ಮಂಡ್ಯ ಜಿಲ್ಲೆಯಲ್ಲಿರುವ 24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು; ಈ ಆರೋಗ್ಯ ಕೇಂದ್ರಗಳ ಘಟಕಗಳ ಪೈಕಿ ಎಷ್ಟು ಕೇಂದ್ರ ಘಟಕಗಳನ್ನು ನಾನ್ ಡೆಲಿವರಿ ಪಾಯಿಂಟ್ ಎಂದು ಗುರುತಿಸಲಾಗಿದೆ; ಇದಕ್ಕೆ ಕಾರಣಗಳೇನು; (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಯು.ಟಿ.ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮಂಡ್ಯ ಜಿಲ್ಲೆಯಲ್ಲಿ 115 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 6 ತಾಲ್ಲೂಕು ಮಟ್ಟದ ಆಸ್ಪತ್ರೆಗಳು ಇರುತ್ತವೆ ಹಾಗೂ ಪ್ರಾಥಮಿಕ ಆರೋಗ್ಯ ಘಟಕ ಇರುವುದಿಲ್ಲ.

ಆ) ಮಂಡ್ಯ ಜಿಲ್ಲೆಯಲ್ಲಿ 115 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರುತ್ತದೆ. ಪ್ರಾಥಮಿಕ ಆರೋಗ್ಯ ಘಟಕಗಳು ಇರುವುದಿಲ್ಲ. ಮಂಜೂರಾಗಿರುವ ಹಾಗೂ ಖಾಲಿ ಇರುವ ವೈದ್ಯಕೀಯ, ಅರೆ ವೈದ್ಯಕೀಯ ಮತ್ತು ಇತರೆ ಸಿಬ್ಬಂದಿಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ಬಗ್ಗೆ ಅನುಬಂಧ–2ರಲ್ಲಿ ನೀಡಲಾಗಿದೆ.

ಈ) ಮಂಡ್ಯ ಜಿಲ್ಲೆಯಲ್ಲಿ ಒಟ್ಟು 30 ಪ್ರಾ.ಆ.ಕೇಂದ್ರಗಳು 24x7 ಆರೋಗ್ಯ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಈ ಎಲ್ಲಾ 24x7 ಆರೋಗ್ಯ ಕೇಂದ್ರಗಳಲ್ಲೂ ಹೆರಿಗೆ ಸೌಲಭ್ಯವಿರುತ್ತದೆ.

ಪ್ರಶ್ನೆ ಸಂಖ್ಯೆ:1198ಕ್ಕೆ

ಅನುಬಂಧ–1

ಮಂಡ್ಯ ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಮಂಜೂರಾದ, ಕರ್ತವ್ಯ ನಿರ್ವಹಿಸುತ್ತಿರುವ ಖಾಲಿ ಇರುವ ಒಟ್ಟು ಹುದ್ದೆಗಳ ವಿವರ. 27.1.2014 ರಲ್ಲಿದ್ದಂತೆ				
ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರು	ಭರ್ತಿ	ಖಾಲಿ
1	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿ	1	1	0
2	ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು	8	7	1
3	ತಾಲ್ಲೂಕು ಆರೋಗ್ಯಧಿಕಾರಿಗಳು	7	7	0
4	ದಂತ ಸರ್ಜನ್	3	3	0
5	ದಂತ ವೈದ್ಯರು	11	10	1
6	ತಜ್ಞ ವೈದ್ಯರು	70	50	20
7	ಹಿರಿಯ ವೈದ್ಯಾಧಿಕಾರಿ	9	5	4
8	ಮುಖ್ಯ ವೈದ್ಯಾಧಿಕಾರಿ	6	1	5
9	ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು	156	127	29

10	ಎಲ್.ಸಿ.ಡಿ.ಆರ್.	1	0	1
11	ಎನ್.ಎಲ್.ಸಿ.ಸಿ. ವೈದ್ಯಾಧಿಕಾರಿ	1	1	0
12	ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ	1	0	1
13	ಎಂಟಾಮಾಲಜಿಸ್ಟ್	1	1	0
14	ಸಹಾಯಕ ಆಡಳಿತಾಧಿಕಾರಿ	5	5	0
15	ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ	1	0	1
16	ಸಹಾಯಕ ಭೋದಕರು	1	0	1
17	ಜಿಲ್ಲಾ ಶುಶ್ರೂಷಕ ಅಧಿಕಾರಿ	1	0	1
18	ಸೇವಾ ಅಭಿಯಂತರರು	1	0	1
19	ಮೈಕ್ರೋಬಯಲಾಜಿಸ್ಟ್	1	0	1
20	ಕಚೇರಿ ಅಧೀಕ್ಷಕರು	16	9	7
21	ಪ್ರಥಮ ದರ್ಜೆ ಸಹಾಯಕರು	94	49	45
22	ದ್ವಿತೀಯ ದರ್ಜೆ ಸಹಾಯಕರು	79	64	15
23	ಶೀಘ್ರಲಿಪಿಗಾರರು	1	1	0
24	ಹಿರಿಯ ಬೆರಳಚ್ಚುಗಾರರು	1	0	1
25	ಬೆರಳಚ್ಚುಗಾರರು	2	1	1

26	ಬೆರಳಚ್ಚುಗಾರರು ಹಾಗೂ ಸಹಾಯಕರು	12	2	10
27	ಸಹಾಯಕ ಸಾಂಖ್ಯಿಕ ಅಧಿಕಾರಿ	3	2	1
28	ಸ್ಕಿಲ್ಡ್ ಟ್ರೇಡ್ಸ್‌ಮನ್	2	0	2
29	ಚಲನಚಿತ್ರ ಪ್ರದರ್ಶಕರು	1	1	0
30	ಆರೋಗ್ಯ ಮೇಲ್ವಿಚಾರಕರು	3	0	3
31	ಶುಶ್ರೂಷಣಾದಾದಿ ದರ್ಜೆ–1	1	0	1
32	ಶುಶ್ರೂಷಣಾದಾದಿ ದರ್ಜೆ–2	6	4	2
33	ಶುಶ್ರೂಷಣಾದಾದಿ	207	167	40
34	ಹಿರಿಯ ಫಾರ್ಮಾಸಿಸ್ಟ್	16	10	6
35	ಕಿರಿಯ ಫಾರ್ಮಾಸಿಸ್ಟ್	137	96	41
36	ಹಿರಿಯ ಪ್ರಯೋಗಶಾಲಾ ತಂತ್ರಜ್ಞರು	14	3	11
37	ಕಿರಿಯ ಪ್ರಯೋಗಶಾಲಾ ತಂತ್ರಜ್ಞರು	91	83	8
38	ಕ್ಷ–ಕಿರಣ ತಂತ್ರಜ್ಞರು	19	19	0
39	ಫಿಜಿಯೋಥೆರಪಿಸ್ಟ್(ಕುಷ್ಟ)	1	0	1
40	ನೇತ್ರಸಹಾಯಕರು	25	23	2
41	ಜಿಲ್ಲಾ ನರ್ಸಿಂಗ್ ಅಧಿಕಾರಿ (ಡಿಎನ್‌ಒ)	1	0	1

42	ಮೈಕ್ರೋ ಬಯೋಲಜಿಸ್ಟ್	1	0	1
43	ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ	17	11	6
44	ಹಿ.ವೈ.ಮೇಲ್ವಿಚಾರಕರು	1	0	1
45	ಕಿ.ವೈ.ಮೇಲ್ವಿಚಾರಕರು	7	1	6
46	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	426	331	95
47	ಹಿರಿಯ ಮಹಿಳಾ ಆರೋಗ್ಯ ಸಹಾಯಕಿ	58	32	26
48	ಹಿರಿಯ ಪುರುಷ ಆರೋಗ್ಯ ಸಹಾಯಕ	49	29	20
49	ಕಿರಿಯ ಪುರುಷ ಆರೋಗ್ಯ ಸಹಾಯಕ	214	133	81
50	ಪ್ಯಾರಾ ಮೆಡಿಕಲ್ ವರ್ಕರ್	4	1	3
51	ವಾಹನಚಾಲಕರು	66	41	25
52	ಫೀಲ್ಡ್ ಅಸಿಸ್ಟೆಂಟ್	1	0	1
53	ಫೀಲ್ಡ್ ವರ್ಕರ್	3	0	3
54	ಮೆಕಾನಿಕ್	1	0	1
55	ರೆಫ್ರಿಜರೇಟರ್ ಮೆಕಾನಿಕ್	1	0	1
56	ಲ್ಯಾಬ್ ಅಟೆಂಡರ್	11	3	8
57	ಅಕ್ಷರಸ್ಥ ಸಹಾಯಕರು	1	1	0

58	ಓ.ಟಿ.ಅಟೆಂಡರ್	3	3	0
59	ಗ್ರೂಪ್ ಡಿ	547	259	288
60	ಕ್ಷ-ಕಿರಣ ಸಹಾಯಕ	10	1	9
61	ಅಡಿಗೆಯವರು	10	0	10
62	ಅಡಿಗೆ ಸಹಾಯಕರು	4	0	4
63	ದೋಬಿ	4	0	4
64	ಸ್ಕಿಲ್ಡ್ ಅಸಿಸ್ಟೆಂಟ್	1	1	0
65	ಹೆಲ್ಪರ್	20	0	20
	ಒಟ್ಟು	**2462**	**1656**	**806**

ಅನುಬಂಧ–2

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ತಜ್ಞ ವೈದ್ಯರು, ಮತ್ತು ಇತರೆ ಸಿಬ್ಬಂದಿ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು:

1. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ.) ದ ಅಡಿಯಲ್ಲಿ ಸ್ತ್ರೀರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವ ಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹ 80,000 ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ₹ 60,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.
2. ಕೆ.ಹೆಚ್.ಎಸ್.ಡಿ.ಆರ್.ಪಿ. ಯೋಜನೆಯಡಿಯಲ್ಲಿ ಇತರೆ ತಜ್ಞತೆಗಳಿಗೆ (ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತುಪಡಿಸಿ) ಸಂಬಂದಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕ್ರಮವಾಗಿ ಮಾಸಿಕ ₹ 65,000 ಹಾಗೂ ₹ 50,000 ದಂತೆ ಗೌರವಧನ ನೀಡಲಾಗುತ್ತಿದೆ, ಮುಂದುವರೆದು, ರೀಟೈನರ್‌ಷಿಪ್ ಆಧಾರದಲ್ಲಿ ನೇಮಕ ಮಾಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ಗೌರವಧನವನ್ನು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹ 5,000 ದಿಂದ ₹ 10,000 ಕ್ಕೆ ಹೆಚ್ಚಿಸಿ ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ₹ 8,000 ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಸದರಿ ತಜ್ಞರು ಹೊರ ರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ₹ 1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

3. ಮೇಲೆ ತಿಳಿಸಿದಂತೆ ಎನ್.ಆರ್.ಹೆಚ್.ಎಂ./ಕೆ.ಹೆಚ್.ಎಸ್.ಡಿ.ಆರ್.ಪಿ. ಅಡಿಯಲ್ಲಿ ಅವಕಾಶಗಳನ್ನು ಕಲ್ಪಿಸಿದ್ದಾಗ್ಯೂ, ಎನ್.ಆರ್.ಹೆಚ್.ಎಂ. ಅಡಿಯಲ್ಲಿ ಕೇವಲ 60 ತಜ್ಞ ವೈದ್ಯರು ಮತ್ತು 70 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಹಾಗೂ ಕೆ.ಹೆಚ್.ಎಸ್.ಡಿ.ಆರ್.ಪಿ. ಅಡಿಯಲ್ಲಿ ಕೇವಲ 63 ವಿವಿಧ ತಜ್ಞತೆ ಹೊಂದಿದ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಒಟ್ಟಾರೆ, ಸರ್ಕಾರಿ ಆಸ್ಪತ್ರೆ / ಕೇಂದ್ರಗಳಲ್ಲಿ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸಲು ಮುಂದೆ ಬರುತ್ತಿರುವವರ ಸಂಖ್ಯೆ ಉತ್ತೇಜನಕಾರಿಯಾಗಿಲ್ಲ.

4. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಮತ್ತು ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.

5. ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 600 ತಜ್ಞ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಇತ್ತೀಚೆಗೆ ಕ್ರಮ ಕೈಗೊಳ್ಳಲಾಗಿ ಒಟ್ಟು 252 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಯ್ಕೆಯಾದ ಎಲ್ಲಾ 252 ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ, ಕೇವಲ 137 ಅಭ್ಯರ್ಥಿಗಳ ಸ್ಥಳ ಆಯ್ಕೆ ಮಾಡಿಕೊಂಡರು. ಆ ಪೈಕಿ ಕೇವಲ 75 ಅಭ್ಯರ್ಥಿಗಳು ಮಾತ್ರ ಕಾರ್ಯವರದಿ ಮಾಡಿಕೊಂಡಿದ್ದಾರೆ.

6. ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಒಟ್ಟು 2586 ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ ಇತ್ತೀಚೆಗೆ ಗುತ್ತಿಗೆ ಆಧಾರದ ಮೇಲೆ 284 ಅಲೋಪತಿ ಮತ್ತು 45 ಆಯುಷ್ ಹಾಗೂ 230 ಬಂಧ-ಪತ್ರ ಅನುಷ್ಠಾನಕೋಶದಿಂದ ನೇಮಕಗೊಂಡ ವೈದ್ಯರು ಸೇರಿದಂತೆ ಒಟ್ಟು 2331 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 255 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿಯಿವೆ. ಖಾಲಿ ಇರುವ ಸಾಮಾನ್ಯ

ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಜಿಲ್ಲಾಧಿಕಾರಿಗಳಿಗೆ ಸರ್ಕಾರವು ಅನುಮತಿ ನೀಡಿದೆ. ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿದೆ.

7. ಇಲಾಖೆಯಲ್ಲಿ ಖಾಲಿ ಇರುವ ತಜ್ಞವೈದ್ಯರು ಹಾಗೂ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಕೋರಲಾಗಿದೆ.
8. ಇಲಾಖೆಯಲ್ಲಿ ಬ್ಯಾಕ್ ಲಾಗ್ ಇದ್ದ ಹುದ್ದೆಗಳಲ್ಲಿ 107 ಕಿರಿಯ ಆರೋಗ್ಯ ಸಹಾಯಕರು (ಪುರುಷ) ಮತ್ತು 16 ಫಾರ್ಮಾಸಿಸ್ಟ್ ಹುದ್ದೆಗಳಿಗೆ ನೇಮಕಾತಿ ಆದೇಶವನ್ನು ಇತ್ತೀಚೆಗೆ ನೀಡಲಾಗಿದೆ.
9. ಇಲಾಖೆಯಲ್ಲಿ ಖಾಲಿ ಇರುವ 2323 ಹಾಸ್ಪಿಟಲ್ ಅಟೆಂಡರ್ ಗ್ರೇಡ್–2 ಗ್ರೂಪ್ 'ಡಿ' ಹುದ್ದೆಗೆ ದಿನಾಂಕ: 20.01.2014 ರಿಂದ 26.01.2104 ರ ವರೆಗೆ ನೇಮಕಾತಿ ಆದೇಶ ನೀಡಲಾಗಿದೆ.
10. ಖಾಲಿ ಇರುವ ಹುದ್ದೆಗಳ ಪೈಕಿ 313 ಕಿರಿಯ ಆರೋಗ್ಯ ಸಹಾಯಕ/ಸಹಾಯಕಿಯರ ಹುದ್ದೆಗೆ ಕೌನ್ಸಿಲಿಂಗ್ ಮುಖಾಂತರ ದಿನಾಂಕ: 29.01.2014 ರಂದು ನೇಮಕಾತಿ ಆದೇಶ ನೀಡಲಾಗುವುದು.
11. 735 ಕಿರಿಯ ಆರೋಗ್ಯ ಸಹಾಯಕರು (ಮಹಿಳೆ) ಹುದ್ದೆಗೆ ನೇಮಕಾತಿ ಆಯ್ಕೆ ಪಟ್ಟಿಯನ್ನು ಈಗಾಗಲೆ ಪ್ರಚಾರ ಪಡಿಸಿದ್ದು, ಫೆಬ್ರುವರಿ 2014 ರಲ್ಲಿ ಕೌನ್ಸಿಲಿಂಗ್ ಮುಖಾಂತರ ನೇಮಕಾತಿ ಆದೇಶ ನೀಡಲು ಕ್ರಮಕೈಗೊಳ್ಳಲಾಗುವುದು.
12. ಈ ಕೆಳಕಂಡ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಅನುಮತಿ ನೀಡಿದ್ದು, ಭಾರತ ಸಂವಿಧಾನ ಅನುಚ್ಛೇಧ 371 ಜೆ ರಡಿಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ನಿಯಮಗಳನ್ನು ರೂಪಿಸಿದೆ. ಈ ನಿಯಮಗಳನ್ವಯ ಪ್ರದೇಶವಾರು ಹುದ್ದೆಗಳ ಮಾಹಿತಿ ಸಂಗ್ರಹಿಸಿ. ಈ ನಿಯಮಗಳನ್ವಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು.

ಕ್ರ ಸಂ	ಹುದ್ದೆ	ಭರ್ತಿ ಮಾಡುವ ಸಂಖ್ಯೆ
1	ವಾಹನ ಚಾಲಕರು	318
2	ಗ್ರೂಪ್ ಸಿ ವೃಂದದ ಅರೆವೈದ್ಯಕೀಯ ಹುದ್ದೆಗಳು	450
3	ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ	145
4	ಹಿರಿಯ ಪ್ರಯೋಗ ಶಾಲಾ ಟೆಕ್ನಾಲಾಜಿಸ್ಟ್	87
	ಒಟ್ಟು	1331

ಬಿ.ಎಸ್. ನಾಗರಾಜ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು)

ಸಂತೇಬಾಚನಹಳ್ಳಿ

853(1199); ಶ್ರೀ ಚೆಲುವರಾಯಸ್ವಾಮಿ. ಎನ್ (ನಾಗಮಂಗಲ)

ಅ) ಬೆಂಗಳೂರಿನ ಶ್ರೀನಗರದಿಂದ ಬೆಳಿಗ್ಗೆ 6:30ಕ್ಕೆ ಮಧ್ಯಾಹ್ನ 2:30ಕ್ಕೆ ನಾಗಮಂಗಲಕ್ಕೆ ಹೋಗುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಕೃಷ್ಣರಾಜಪೇಟೆ ತಾಲ್ಲೂಕು ಹೋಬಳಿ ಕೇಂದ್ರವಾದ ಸಂತೇಬಾಚಹಳ್ಳಿಯವರೆಗೆ ವಿಸ್ತರಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ;

ಆ) ಮೈಸೂರಿನಿಂದ ಸಂತೇಬಾಚನಹಳ್ಳಿಗೆ ಬೆಳಗ್ಗೆ 6:30 ಮತ್ತು ಸಂಜೆ 4:30ಕ್ಕೆ ಅದೇ ರೀತಿ ಇದೇ ಸಮಯಕ್ಕೆ ಸಂತೇಬಾಚನಹಳ್ಳಿಯಿಂದ ಮೈಸೂರಿಗೆ ನೇರ ಬಸ್ ಸೌಲಭ್ಯ ಕಲ್ಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ;